ಗುಲಾಂ ಅಲಿ ಖಾನರ ಪ್ರಸಿದ್ಧ ಠುಮರಿ 'ಪ್ರೇಮ ಜೋಗನ್ ಬನಕೆ ಹಾಡಲು ಶುರುಮಾಡಿದ. ಸೋಹನಿ ರಾಗದಲ್ಲಿದ್ದ ಆ ಠುಮರಿ ಕಿವಿಗಳನ್ನು ಪ್ರೇಮಿಕೆಯಂತೆ ಮುದ್ದಿಸತೊಡಗಿತು. ವಿರಹ ತಪ್ತಳಾದ ಪ್ರೇಮಿಕೆ ಕಂಬನಿ ಮಿಡಿಯುತ್ತ ಎಲ್ಲ ಅಡೆತಡೆಗಳನ್ನು ಮೀರಿ ಇನಿಯನನ್ನು ಸೇರಲು ತೊರೆಯಾಗಿ ಹರಿದು ಬರುವ ಭಾವ ತೀವ್ರತೆ! ಧ್ವನಿವರ್ಧಕವಿಲ್ಲದಿದ್ದರೂ ಸ್ವರಗಳ ಸ್ಫುಟತೆಯಿಂದಾಗಿಯೇ ಸುತ್ತಮುತ್ತ ಹಬ್ಬಿಬಿಟ್ಟಿತ್ತು ಆ ಠುಮರಿ. ಉಸ್ತಾದರ ಕಣ್ಣಲ್ಲಿ ಕಂಬನಿ ಹರಿದಿತ್ತು. ದೂರದಲ್ಲೊಂದು ಮದುವೆ ದಿಬ್ಬಣವು ವಾದ್ಯ ಘೋಷದೊಂದಿಗೆ ಹೋಗುತ್ತಿದ್ದದ್ದು ಈ ಠುಮರಿಯ ನಾದವಲಯಕ್ಕೆ ಬೆರಗಾಗಿ ಸ್ತಬ್ದವಾಗಿ ನಿಂತಿತ್ತು. ಎಲ್ಲರೂ ಹಾಡು ಕೇಳಿ ನಿಂತಿದ್ದಾರೆ. ರಾಮಪುರದ ಮಹಾರಾಜನ ಮಗನ ಮದುವೆ ದಿಬ್ಬಣವೆಂದು ಉಸ್ತಾದರಿಗೆ ತಿಳಿಯಿತು.

ತಮ್ಮ ಬಗ್ಗೆ ಅವರಿಗೆ ಗರ್ವವೆನ್ನಿಸಿತು. ತನ್ನ ಶಿಷ್ಯನ ಧ್ವನಿಗೆ ಜಗತ್ತು ತಲೆದೂಗಿದೆ. ತಲೆಬಾಗುವ ದಿನ ದೂರವಿಲ್ಲ. ಮುಫೀದ ಖಾನರಿಗೆ ಬಹುದಿನದಿಂದ ಕಾಡುತ್ತಿದ್ದ ಶೂನ್ಯಭಾವ ಮರೆಯಾಯಿತು. ಇದೇ ತನ್ನ ಸಾಧನೆ. ಮಿಹಿರನ ಗಾಯನದಲ್ಲೇ ತನ್ನ ಪರಿಪೂರ್ಣತೆ ಎಂದನ್ನಿಸಿತು. ಖುದ್ದು ಮಹಾರಾಜರ ದಿವಾನರು ನಾಳೆ ಬಂದು ಮದುವೆಗೆ ಹಾಡಲು ದಾವತ್ ಕೊಟ್ಟರು. ಉಸ್ತಾದರ ಆನಂದಕ್ಕೆ ಪಾರವಿಲ್ಲ. ತಲ್ಲೀನನಾಗಿ ಹಾಡುತ್ತಿದ್ದ ಮಿಹಿರನನ್ನು ಅವರು ಅಡ್ಡಿ ಪಡಿಸಲಿಲ್ಲ. ಹಾಡುತ್ತಿದ್ದ ಮಿಹಿರನಿಗೆ ದಿಬ್ಬಣದ ಪಲ್ಲಕ್ಕಿಯ ಒಳಗೆ ಅರ್ಧ ತೆರೆದ ಪರದೆಯ ಒಳಗೆ ಸೋಹನಿ ಕಂಡಳು! ಅವಳ ಅಸ್ಪಷ್ಟವಾಗಿದ್ದ ಮುಖದಲ್ಲಿದ್ದ ಭಾವವನ್ನು ಮಿಹಿರನ ಕಣ್ಣಿಗಿಂತ ಕಂಠವು ಗ್ರಹಿಸಿತ್ತು. ರಾಮಪುರದ ಮಹಾರಾಜನ ಮಗನನ್ನು ಕೈಹಿಡಿಯಲು ಹೋಗುತ್ತಿದ್ದ ಅವಳ ಯಾತ್ರೆಗೆ ಈ ಠುಮರಿ ಗಂಭೀರವಾಗಿ ಒಪ್ಪುತ್ತಿತ್ತು. ಠುಮರಿಯ ಕಡೆಯ ಆಲಾಪ ಮುಗಿಸಿದ ಮಿಹಿರ ಗಾಯನ ನಿಲ್ಲಿಸಲಿಲ್ಲ. ಸೋಹನಿರಾಗದ ಚಲನೆಯು ತಿರುವು ಪಡೆದು ಮಾರವಾ ರೂಪದಲ್ಲಿ ಮುಂದುವರಿಯಿತು. ಉಸ್ತಾದರು ಮಿಹಿರನ ಸಂಗೀತ ಪ್ರಜ್ಞೆಗೆ ತಲೆದೂಗಿದರು. ಸೋಹನಿಯಿಂದ ನೇರ ಮಾರವಾಕ್ಕೆ ಬಂದಾಗಲೂ ಸೋಹನಿಯ ಛಾಯೆ ಎಳ್ಳಷ್ಟೂ ಇಲ್ಲದೇ ಹಾಡಲು ದೈವದತ್ತ ಕಂಠಬೇಕು. ಸ್ಥಿತ



ಪ್ರಜ್ಞೆ ಬೇಕು. ದಟ್ಟ ವೈರಾಗ್ಯ ಭಾವ ಶೃಂಗಾರದ ಬೆನ್ನಿಗೇ ಹುಟ್ಟಿಕೊಂಡಿತ್ತು. ಉಸ್ತಾದರು ಗೆದ್ದಿದ್ದರು. ಯಶಸ್ಸು ಅವರ ಹಣೆಯಲ್ಲಿ ಈ ರೀತಿ, ಮಿಹಿರನ ರೂಪದಲ್ಲಿ ಬರೆದಿತ್ತು. ಮಾರವಾ ರಾತ್ರಿಯನ್ನು ಆವರಿಸಿಕೊಂಡು ಮುಂದುವರೆಯಿತು. ಉಸ್ತಾದರು ನಕ್ಕರು, ಕುಣಿದರು, ಮಿಹಿರನ್ನು ತಬ್ಬಿ ಮುತ್ತಿಟ್ಟರು. ಮರು ಕ್ಷಣಕ್ಕೆ ಕಂಬನಿ ಮಿಡಿದರು. ಭಾವಗಳ ಮೆರವಣಿಗೆಯ ನಡುವೆ ಮದುವೆ ದಿಬ್ಬಣ ಮರೆಯಾಯಿತು. ಮಿಹಿರನ ಕಣ್ಣಲ್ಲಿ ಮೂಡಿದ ಕಂಬನಿಯಲ್ಲಿ ಸಂಗೀತದ ಕುರಿತ ಆರಾಧನಾ ಭಾವವೇ ಗೋಚರಿಸಿತು ಉಸ್ತಾದರಿಗೆ. ●